ANNEXURE-19

# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

'ಜ್ಞಾನ ಸಂಗಮ', ಬೆಳಗಾವಿ - ೫೯೦ ೦೧೮ ಕರ್ನಾಟಕ ರಾಜ್ಯ

ದೂರವಾಣಿ: (೦೮೩೧) ೨೪೦೫೪೬೮

ಕುಲಸಚಿವರು

ಫ್ಯಾಕ್ಸ್ : (೦೮೩೧) ೨೪೦೫೪೬೭

ಉಲ್ಲೇಖ ಸಂ:ವಿತಾವಿ/ಶೈಕ್ಷಣಿಕ /೨೦೧೩-೨೦೧೪/ಎ-೩/ 6889 ದಿನಾಂಕ: 16 SEP 2013

## ಅಧಿಸೂಚನೆ

ವಿಷಯ: ೨೦೧೩-೨೦೧೪ನೇ ಸಾಲಿಗಾಗಿ ಮುಂದುವರಿಕೆ: ವಿಸ್ತರಣಾ ಸಂಯೋಜನೆ ಮಂಜೂರಾತಿ ಕುರಿತು.

ಉಲ್ಲೇಖ: ೧) ಅರ್ಜಿ ದಿನಾಂಕ: ೦೯.೦೧.೨೦೧೩.
೨) ಕುಲಪತಿಯವರ ಆದೇಶ ದಿನಾಂಕ: ೦೬.೦೯.೨೦೧೩.

೧೯೯೪ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಧಿನಿಯಮ ೫೩ರ (೯)ನೇ ಪ್ರಕರಣದಡಿ ತಮ್ಮ ಮಹಾವಿದ್ಯಾಲಯದಲ್ಲಿರುವ ಪ್ರಸ್ತುತ ಈ ಕೆಳಗೆ ಕಾಣಿಸಿದ ಕೋರ್ಸಗಳಿಗೆ ಬೋಧಿಸಲು ೨೦೧೩-೨೦೧೪ನೇ ಶೈಕ್ಷಣಿಕ ಸಾಲಿಗಾಗಿ ಸಂಯೋಜನಾ ಮಂಜೂರಾತಿ ನೀಡಲಾಗಿದೆ.

| | | | |
|---|---|---|---|
| I | ಮೊದಲನೇ ವರ್ಷದಿಂದ ೪ನೇ ವರ್ಷದ ಬಿ.ಇ. ಪದವಿ ಕೋರ್ಸಗಳು | ಅ.ನಂ. | ಕೋರ್ಸಗಳು |
| | | ೧. | ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಶನ್ ಇಂಜಿನಿಯರಿಂಗ್ |
| | | ೨. | ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ |
| | | ೩. | ಇನ್ಫಾರ್ಮೇಶನ್ ಸೈನ್ಸ್ & ಇಂಜಿನಿಯರಿಂಗ್ |
| | | ೪. | ಸಿವಿಲ್ ಇಂಜಿನಿಯರಿಂಗ್ |
| | | ೫. | ಮೆಕ್ಯಾನಿಕಲ್ ಇಂಜಿನಿಯರಿಂಗ್ |
| II | ಮೊದಲನೇ ಹಾಗೂ ೨ನೇ ವರ್ಷದ ಸ್ನಾತಕೋತ್ತರ ಕೋರ್ಸ | ೧. | ಎಂ. ಟೆಕ್ ಇನ್ ವಿಎಲ್ಎಸ್ಐ ಡಿಸೈನ್ ಮತ್ತು ಎಂಬೆಡೆಡ್ ಸಿಸ್ಟಮ್ |

ತಮ್ಮ ಕಾಲೇಜಿನಲ್ಲಿ ೨೦೧೨-೨೦೧೩ನೇ ಸಾಲಿಗೆ ಎಂ.ಬಿ.ಎ. ಸ್ನಾತಕೋತ್ತರ ಕೋರ್ಸು ಹೊಸದಾಗಿ ಪ್ರಾರಂಭವಾಗಿದ್ದು ಸರಿಯಷ್ಟೆ. ಆದರೆ, ಈ ಸದರಿ ಕೋರ್ಸು ಪ್ರಾರಂಭವಾಗಿರುವ ಕುರಿತು ರಾಜ್ಯ ಸರ್ಕಾರದಿಂದ ಆದೇಶ ಈವರೆಗೂ ಬಂದಿರುವುದಿಲ್ಲಾ. ಆದುದರಿಂದ, ರಾಜ್ಯ ಸರ್ಕಾರದಿಂದ ಆದೇಶ ಪಡೆದು ವಿತಾವಿಗೆ ಕಳುಹಿಸಿದ ನಂತರ ಮುಂದಿನ ಕ್ರಮ ಕೈಕೊಳ್ಳಲಾಗುವುದು.

<u>ಅಡಕ:</u> ೨೦೧೩-೨೦೧೪ನೇ ಸಾಲಿನ ಹೊಸ ವಿಷಯ / ವಿದ್ಯಾರ್ಥಿ ಪ್ರಮಾಣ ವ್ಯತ್ಯಯದ ಕುರಿತು ವಿ.ತಾ.ವಿ.ಯ ಶಿಫಾರಸ್ಸಿನ ಪ್ರತಿಯನ್ನು ಲಗತ್ತಿಸಲಾಗಿದೆ.

<u>ಸೂಚನೆ: ಸ್ಥಳ ಪರಿಶೀಲನಾ ತನಿಖಾ ಸಮಿತಿಯು ವಿಧಿಸಿರುವ ಷರತ್ತುಗಳನ್ನು ೨೦೧೩-೨೦೧೪ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮುಂಚಿತವಾಗಿ ಪೂರ್ಣಗೊಳಿಸಿ ವಿತಾವಿಗೆ ಅನುಸರಣಾ ವರದಿಯನ್ನು ಕಳುಹಿಸಲು ತಿಳಿಸಲಾಗಿದೆ.</u>

<u>ವಿಶೇಷ ಸೂಚನೆ:</u> ಸದರಿ ವಿತಾವಿಯ ಶಿಫಾರಸ್ಸುಗಳು ಸರ್ಕಾರ/ಎಐಸಿಟಿಇ, ಯಿಂದ ಅನುಮೋದಿತವಾದಲ್ಲಿ ಮಾತ್ರ ಅನ್ವಯಿಸುತ್ತವೆ. ಈ ವಿಷಯದಲ್ಲಿ ವಿತಾವಿಯ ಶಿಫಾರಸ್ಸುಗಳು ಯಾವುದೇ ಹಕ್ಕುಬಾಧ್ಯತೆಗೆ ಅನ್ವಯಿಸುವುದಿಲ್ಲವೆಂದೂ/ಮಹಾವಿದ್ಯಾಲಯ ಯಾವುದೇ ಅಧಿಕಾರಿವರ್ಗಕ್ಕೆ ಈ ಶಿಫಾರಸ್ಸಿನ ಮೇರೆಗೆ ಅರ್ಜಿ ಸಲ್ಲಿಸಲು ಬಾಧ್ಯತೆ ಇಲ್ಲವೆಂದು ತಿಳಿಸಲಾಗಿದೆ.

ಕುಲಸಚಿವರು

ಗೆ,
ಪ್ರಾಂಶುಪಾಲರು,
ಬಿ.ಜಿ.ಎಸ್. ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ,
<u>ಬಾಲಗಂಗಾಧರನಾಥ ನಗರ – ೫೭೧ ೪೪೮.</u>
ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.

<u>ಪ್ರತಿ ಸಾದರಪೂರ್ವಕವಾಗಿ ಮಾಹಿತಿಗಾಗಿ ರವಾನಿಸಲಾಗಿದೆ:</u>

೧. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು – ೫೬೦ ೦೦೧.
೨. ಕುಲಸಚಿವರು (ಮೌಲ್ಯಮಾಪನ), ವಿ.ತಾ.ವಿ. ಬೆಳಗಾವಿ.
೩. ವಿಶೇಷಾಧಿಕಾರಿಗಳು, ವಿ.ತಾ.ವಿ. ಪ್ರಾದೇಶಿಕ ಕಚೇರಿ, ಮೈಸೂರು.

<u>ಪ್ರತಿ ಮಾಹಿತಿಗಾಗಿ:</u>